146

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–3421/2015

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 27/02/2017.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಕುವೆಂಪು ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ: ಕೆ.ವಿ. 315ರ 37 X 50 ಅಡಿಗಳ ಅಳತೆವುಳ್ಳ ನಿವೇಶನವು ಮಂಡ್ಯ ನಗರಸಭೆ ಮುನ್ಸಿಪಲ್ ವತಿಯಿಂದ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರ ಹೆಸರಿಗೆ ಕಾನೂನು ಬಾಹಿರವಾಗಿ ಖಾತೆಯಾಗಿರುವ ನಿವೇಶನದ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ.ವೆಂಕಟೇಶ್ವರ ಬಿನ್ ಲಿಂಗಯ್ಯ, ಮನೆ ಸಂ. 1159, ಅಶೋಕ ನಗರ, 4ನೇ ಕ್ರಾಸ್, ಮಂಡ್ಯ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ.ರಾಮಸ್ವಾಮಿ, ನಿವೃತ್ತ ನಗರಸಭೆ ಆಯುಕ್ತರು, ನಗರಸಭೆ, ಮಂಡ್ಯ, (2) ಶ್ರೀ.ಜಯರಾಮ, ಹಿಂದಿನ ದ್ವಿತೀಯಾ ದರ್ಜೆ ಸಹಾಯಕರು, ನಗರಸಭೆ, ಮಂಡ್ಯ ಹಾಲಿ ನಗರಸಭೆ, ರಾಮನಗರ ಜಿಲ್ಲೆ, (3) ಶ್ರೀ.ಸಿ.ರಾಜಣ್ಣ, ನಿವೃತ್ತ ಪ್ರಥಮ ದರ್ಜೆ ಸಹಾಯಕರು, ಕುವೆಂಪುನಗರ, ಮಂಡ್ಯ (ಇನ್ನು ಮುಂದೆ '1 ರಿಂದ 3ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಮಂಡ್ಯ ನಗರಸಭೆ ಮುನ್ಸಿಪಲ್ ನಿವೇಶನ ಸಂಖ್ಯೆ: ಕೆ.ವಿ. 315ರ 37 X 50 ಅಡಿಗಳ ಅಳತೆವುಳ್ಳ ನಿವೇಶನವು ಮಂಡ್ಯ ನಗರದ ಕುವೆಂಪು ಬಡಾವಣೆಯಲ್ಲಿದ್ದು, ಸದರಿ ನಿವೇಶನವನ್ನು ನಗರಸಭೆಯ ಕಛೇರಿಯ ದಾಖಲಾತಿ ಪುಸ್ತಕ (ಅಸೆಸ್‌ಮೆಂಟ್ ವಹಿ) ದಲ್ಲಿ ಅಲಾಟ್‌ದಾರರ ಹೆಸರನ್ನು ದಾಖಲಿಸಿ, ಅದನ್ನು ತಿದ್ದಿ ಬಿ.ಚೌಡಯ್ಯ ಎಂಬುದಾಗಿ ದಾಖಲಾಸಿ, ತದನಂತರ ಯಾವುದೇ ನೋಂದಾಯಿತ ಪತ್ರಗಳಿಲ್ಲದೇ 1 ರಿಂದ 3ನೇ ಎದುರುದಾರರು

ಅನಧಿಕೃತವಾಗಿ ಹಕ್ಕು ವರ್ಗಾವಣೆಯನ್ನು ಶ್ರೀಮತಿ.ಲತಾ ಕೋಂ ಸಿ.ರ್‍ರಾಜಣ (ನಗರಸಭೆಯ ನಿವೃತ್ತ ಗುಮಾಸ್ತರು) ರವರ ಹೆಸರಿಗೆ ಖಾತೆಯನ್ನು ತಿದ್ದಿ ದಾಖಲೆ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ. ಮತ್ತೆ ಮುಂದುವರೆದು ಸದರಿ ನಿವೇಶನವು ರೂ. 40 ಲಕ್ಷ ಬೆಲೆ ಬಾಳುವುದಾಗಿದ್ದು, ಇದರಲ್ಲಿ ರೂ. 60 ಲಕ್ಷ ಬೆಲೆ ಬಾಳುವ ಮನೆಯನ್ನು ನಿರ್ಮಾಣ ಮಾಡಿರುತ್ತಾರೆಂದು ಹಾಗೂ ಇದಕ್ಕೆ ನೀಡಿರುವ ಲೈಸನ್ಸ್ ಅಕ್ರಮ ಖಾತೆ ಆಗಿರುವುದರಿಂದ ಇದನ್ನು ರದ್ದುಪಡಿಸಲಾಗಿರುತ್ತದೆಂದು ಸಹಾ ತಿಳಿಸಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ಮಂಡ್ಯ ನಗರಸಭೆಯ ಪೌರಾಯುಕ್ತರು ದಿನಾಂಕ: 22/05/2013 ರಲ್ಲಿ ಜಿಲ್ಲಾಧಿಕಾರಿಗಳು ಹಾಗೂ ನಿರ್ದೇಶಕರಿಗೆ ಸದರಿ ನಿವೇಶನ ಅಕ್ರಮವಾಗಿ ಖಾತೆ ಆಗಿರುವುದನ್ನು ತನಿಖೆ ಮಾಡಬೇಕೆಂದು ಕೋರಿರುತ್ತಾರೆ. ಹೀಗಿದ್ದರೂ ಸಹಾ ಎದುರುದಾರರುಗಳು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನ ಜೊತೆಗೆ ದಿನಾಂಕ: 13/02/2013 ರಂದು ವಿಜಯವಾಣಿ ದಿನಪತ್ರಿಕೆಯ ಪೇಪರ್ ಕಟ್ಟಿಂಗ್‌ನ ಜೆರಾಕ್ಸ್ ಪ್ರತಿ, ಪೌರಾಯುಕ್ತರು, ನಗರಸಭೆ, ಮಂಡ್ಯ ರವರು ದಿನಾಂಕ: 07/09/2012, 21/09/2012, 22/05/2012 ಮತ್ತು 19/12/2012 ರಂದು ಬರೆದಿರುವ ಪತ್ರಗಳ ಜೆರಾಕ್ಸ್ ಪ್ರತಿಗಳು, ಶ್ರೀ.ಎಂ.ಎಸ್.ಸಿದ್ದರಾಮು ರವರು ಪೌರಾಯುಕ್ತರು, ನಗರಸಭೆ, ಮಂಡ್ಯ ರವರಿಗೆ ಬರೆದಿರುವ ಪತ್ರದ ಜೆರಾಕ್ಸ್ ಪ್ರತಿ, ಮಂಡ್ಯ ನಗರಸಭೆಯ ಅಸೆಸ್‌ಮೆಂಟ್ ಲಿಸ್ಟ್, ಮನೆ ಮತ್ತು ಜಮೀನು ತೆರಿಗೆಯ ಜೆರಾಕ್ಸ್ ಪ್ರತಿ ಮತ್ತು ಆಸ್ತಿ ತೆರಿಗೆ ರಿಜಿಸ್ಟರ್‌ನ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಿದ್ದಾರೆ.

3. ದೂರುದಾರರ ದೂರಿಗೆ ಸಂಬಂಧಿಸಿದಂತೆ, 1 ರಿಂದ 3ನೇ ಎದುರುದಾರರು ಒಂದೇ ರೀತಿಯ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳಲ್ಲಿ, ಮಂಡ್ಯ ನಗರಸಭಾ ವ್ಯಾಪ್ತಿಯ ವಿಭಾಗ 04ರ ಆಸ್ತಿ ಸಂಖ್ಯೆ: ಡಿ4/3716/ಕೆವಿ315ರ ಒಟ್ಟು ಅಳತೆ 37 * 50 ಅಡಿಗಳ ಖಾಲಿ ನಿವೇಶನವನ್ನು ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರ ಹೆಸರಿಗೆ ದಿನಾಂಕ: 13/12/1977ರಲ್ಲಿ ನಡೆದ ಕೌನ್ಸಿಲ್ ಮೀಟಿಂಗ್‌ನಲ್ಲಿ ತೀರ್ಮಾನವಾಗಿದ್ದು, ಸದರಿ ನಿವೇಶನಕ್ಕೆ ಕಿಮ್ಮತ್ತಿನ

144

ಹಣವನ್ನು ಪಾವತಿಸುವಂತೆ ದಿನಾಂಕ: 07/01/1978ರಲ್ಲಿ ಎಂಡಾರ್ಸ್‌ಮೆಂಟ್ ನೀಡಲಾಗಿರುತ್ತದೆ ಹಾಗೂ ಈ ನಿವೇಶನವನ್ನು ಹೆಚ್.ಯು.ಡಿ.132/ಎಂ.ಐ.ಪಿ.84, ದಿನಾಂಕ: 17/01/1986 ರಂತೆ ಸರ್ಕಾರದ ಅಧಿಕೃತ ಮಂಜೂರಾಗಿರುತ್ತದೆಂದು ತಿಳಿಸಿರುತ್ತಾರೆ. ಹಾಗೂ ದಿನಾಂಕ: 15/01/1993 ರಂತೆ ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರಿಗೆ ಮಂಡ್ಯ ನಗರಸಭೆಯಿಂದ ರೂ.13,620/- ಗಳನ್ನು ಪಾವತಿಸುವಂತೆ ನೋಟಿಸ್ ಜಾರಿ ಮಾಡಿದ್ದು, ಈ ಸಂಬಂಧ ಮಂಡ್ಯ ನಗರದ ಸಭೆಗೆ ರಶೀದಿ ನಂ. 063096, ದಿನಾಂಕ: 31/03/1993 ರಂತೆ ರೂ.13,620/- ಗಳನ್ನು ಜಮಾ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಇದು ಅಲ್ಲದೇ, ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ಸದರಿ ನಿವೇಶನವನ್ನು ದಿನಾಂಕ: 20/10/2000 ರಲ್ಲಿ ಬಿ.ಚೌಡಯ್ಯ ಬಿನ್ ಬಸವೇಗೌಡ ರವರಿಗೆ ರೂ.68,80/- ಗಳಿಗೆ ನೂರು ರೂಪಾಯಿಯ ಕಾಗದದಲ್ಲಿ ಮಾರಾಟ ಮಾಡಿ ಸ್ವಾಧೀನ ನೀಡಿರುತ್ತಾರೆ, ಈ ದಾಖಲಾತಿಯ ಮೇರೆಗೆ ದಿನಾಂಕ: 30/11/2000 ರಂತೆ ಶ್ರೀ ಬಿ.ಚೌಡಯ್ಯ ರವರ ಹೆಸರಿಗೆ ಖಾತಾ ವರ್ಗಾವಣೆ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ.

4. ಮತ್ತೆ ಮುಂದುವರೆದು ಶ್ರೀ ಬಿ.ಚೌಡಯ್ಯ ರವರು ತಮ್ಮ ಮಗಳಾದ ಶ್ರೀಮತಿ ಲತಾ ರವರಿಗೆ ದಿನಾಂಕ: 25/08/2008 ರಂದು ನೋಂದಣಿ ಕಛೇರಿಯಲ್ಲಿ ದಾನ ಪತ್ರದ ಮುಖಾಂತರ ದಾನಪತ್ರ ಮಾಡಿಕೊಟ್ಟಿರುತ್ತಾರೆಂದು ಹಾಗೂ ಇದರ ಅನ್ವಯ ಶ್ರೀಮತಿ ಲತಾ ರವರು ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಮಂಡ್ಯ ನಗರಸಭೆಯಿಂದ ಪರವಾನಗಿ ಪಡೆದಿರುತ್ತಾರೆಂದು ಹಾಗೂ 1995-96ನೇ ಸಾಲಿನಿಂದ 2015-16ನೇ ಸಾಲಿನವರೆಗೆ ನಿಗಧಿಯಾದ ನಿವೇಶನದ ತೆರಿಗೆ ಪಾವತಿಸಿರುತ್ತಾರೆಂದು ತಿಳಿಸಿರುತ್ತಾರೆ.

5. ದಿನಾಂಕ: 31/03/2016 ರಂದು ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ, ಎದುರುದಾರರು ಸಲ್ಲಿಸಿರುವ ದಾಖಲಾತಿಗಳು ನಕಲಿ (ಬೋಗಸ್) ಆಗಿದ್ದು, ಈ ಬಗ್ಗೆ ಲಗತ್ತಿಸಿರುವ ದಾಖಲಾತಿಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಬೇಕಾಗಿ ಕೋರಿರುತ್ತಾರೆ.

6. ಮೇಲ್ಕಂಡ ಪ್ರಶ್ನಿತ ನಿವೇಶನವನ್ನು ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ಶ್ರೀ ಬಿ.ಚೌಡಯ್ಯ ಬಿನ್ ಬಸವೇಗೌಡ ರವರ ಹೆಸರಿಗೆ ನೂರು ರೂಪಾಯಿಯ ಕಾಗದ ಪತ್ರದ ಮೇಲೆ ಬರೆದು ಕೊಟ್ಟಿರುವ ನೋಂದಾಯಿತವಲ್ಲದ ಕ್ರಯ ಪತ್ರದ ಆಧಾರದ ಮೇಲೆ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರ ಹೆಸರಿಗೆ ದಾನ ಪತ್ರವನ್ನು ನೋಂದಣಿ ಮಾಡಿರುವುದು ಕಂಡುಬರುತ್ತದೆ. ಆದ್ದರಿಂದ, ಈ ರೀತಿ ನೋಂದಣಿ ಮಾಡಿದ ಉಪ ನೋಂದಣಾಧಿಕಾರಿಗಳ ಹೆಸರು ಮತ್ತು ಹಾಲಿ ವಿಳಾಸದ ಬಗ್ಗೆ ಮಾಹಿತಿಯನ್ನು ಪಡೆದು, ಸದರಿಯವರನ್ನು ಮುಖ ಪುಟದಲ್ಲಿ 4ನೇ ಎದುರುದಾರರನ್ನಾಗಿ implead ಮಾಡಿ, ಸದರಿಯವರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿ, ಸದರಿಯವರು ಈ ಕಛೇರಿಗೆ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಯಾವುದೇ ಪೂರಕ ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ 4ನೇ ಎದುರುದಾರರ ಉತ್ತರ ಹಾಗೂ ದಾಖಲಾತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

7. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 2 ರಿಂದ 4ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರಿಗೆ ಕುವೆಂಪು ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ: ಕೆ.ವಿ. 315ರ 37 X 50 ಅಡಿಗಳ ಅಳತೆವುಳ್ಳ ನಿವೇಶನವು ಮಂಡ್ಯ ನಗರಸಭೆ ಮುನ್ಸಿಪಲ್ ವತಿಯಿಂದ ಹೆಚ್.ಯು.ಡಿ.132/ ಎಂ.ಐ.ಪಿ.84, ದಿನಾಂಕ: 17/01/1986 ರಂತೆ ಅಧಿಕೃತ ಮಂಜೂರಾಗಿರುತ್ತದೆ.
- ಸದರಿ ನಿವೇಶನವನ್ನು ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ದಿನಾಂಕ: 20/10/2000 ರಲ್ಲಿ ಬಿ.ಚೌಡಯ್ಯ ಬಿನ್ ಬಸವೇಗೌಡ ರವರಿಗೆ ರೂ.68,800/- ಗಳಿಗೆ ನೂರು ರೂಪಾಯಿಯ ಕಾಗದದಲ್ಲಿ (ಅನ್ ರಿಜಿಸ್ಟರ್ಡ್) ಮಾರಾಟ ಮಾಡಿ ಸ್ವಾಧೀನ ನೀಡಿರುತ್ತಾರೆ.

142

- ದಿನಾಂಕ: 20/10/2000 ರಂದು ನೂರು ರೂಪಾಯಿ ಕಾಗದಲ್ಲಿ ಮಾಡಿದ ಕ್ರಯ ಪತ್ರದಲ್ಲಿ, ಮೇಲ್ಕಂಡ ನಿವೇಶನಕ್ಕೆ ಮಂಡ್ಯ ನಗರಸಭೆಯವರು ನಿಗಧಿಪಡಿಸಿರುವ ಕಿಮ್ಮತನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲವೆಂದು, ಆದ್ದರಿಂದ, ನಿವೇಶನಕ್ಕೆ ನಗರಸಭೆಯಲ್ಲಿ ಕಟ್ಟಬೇಕಾದ ಕಿಮ್ಮತ್ತು, ಕಂದಾಯ ವಗೈರೆಗಳನ್ನು ಪಾವತಿಸಿ, ನಗರಸಭೆಯಿಂದ ನಿಮ್ಮ ಹೆಸರಿಗೆ ಹಕ್ಕು ಪತ್ರವನ್ನು ಪಡೆದುಕೊಂಡು, ಅನುಭವಿಸಿಕೊಂಡು ಹೋಗಬೇಕಾಗಿ ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ನಮೂದಿಸಿರುವುದು ಕಂಡುಬರುತ್ತದೆ.
- ಆದರೆ, 1 ರಿಂದ 3ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳಲ್ಲಿ, ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ಮಂಡ್ಯ ನಗರದ ಸಭೆಗೆ ರಶೀದಿ ನಂ. 063096, ದಿನಾಂಕ: 31/03/1993 ರಂತೆ ರೂ. 13,620/- ಗಳನ್ನು ಜಮಾ ಮಾಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಇದನ್ನೆಲ್ಲಾ ಗಮನಿಸಿದಾಗ ಸದರಿ ರಶೀದಿಯ ನೈಜ್ಯತೆಯ ಬಗ್ಗೆ ಸಂಶಯಾಸ್ಪದವಾಗಿರುತ್ತದೆ.
- ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ಕಿಮ್ಮತ್ತು ಪಾವತಿಸದ ಮೇಲ್ಕಂಡ ನಿವೇಶನಕ್ಕೆ 1 ರಿಂದ 3ನೇ ಎದುರುದಾರರುಗಳು ಸದರಿ ನಿವೇಶನವನ್ನು ನಗರಸಭೆಯ ಕಛೇರಿಯ ದಾಖಲಾತಿ ಪುಸ್ತಕ (ಅಸೆಸ್‌ಮೆಂಟ್ ವಹಿ) ದಲ್ಲಿ ಬಿ.ಚೌಡಯ್ಯ ಬಿನ್ ಬಸವೇಗೌಡ ಎಂಬುದಾಗಿ ದಾಖಲಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಸದರಿ ನಗರಸಭೆಯ ದಾಖಲಾತಿಗಳ ಆಧಾರದ ಮೇರೆಗೆ ಶ್ರೀ ಬಿ.ಚೌಡಯ್ಯ ಬಿನ್ ಬಸವೇಗೌಡ ರವರು ತಮ್ಮ ಮಗಳಾದ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ (ಸಿ.ರಾಜಣ್ಣ- 3ನೇ ಎದುರುದಾರರು) ರವರ ಹೆಸರಿಗೆ ದಿನಾಂಕ: 25/08/2008 ರಂದು ನೋಂದಣಿ ಕಛೇರಿಯಲ್ಲಿ ದಾನ ಪತ್ರದ ಮುಖಾಂತರ ದಾನಪತ್ರ ಮಾಡಿಕೊಟ್ಟಿರುತ್ತಾರೆ.
- ಈಗಲಾದರೂ 1 ರಿಂದ 3ನೇ ಎದುರುದಾರರುಗಳು ಸದರಿ ದಾಖಲಾತಿಯನ್ನು ಕೂಲಂಕಷವಾಗಿ ಪರಿಶೀಲಿಸದೇ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರ ಹೆಸರನ್ನು

Sd/-

ಮೇಲ್ಕಂಡ ಪ್ರಶ್ನಿತ ನಿವೇಶನಕ್ಕೆ ದಾಖಲಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- ಇದು ಅಲ್ಲದೇ, ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರು ಕಟ್ಟಡ ಪರವಾನಗಿಗಾಗಿ ಸಲ್ಲಿಸಿರುವ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸದೇ 1 ರಿಂದ 3ನೇ ಎದುರುದಾರರುಗಳು ಕರ್ತವ್ಯ ಲೋಪವೆಸಗಿರುತ್ತಾರೆ. ಹಾಗೂ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರು 3ನೇ ಎದುರುದಾರರ ಪತ್ನಿಯೇ ಆಗಿರುವುದು ಸಹಾ ಕಂಡುಬರುತ್ತದೆ.
- ಮೇಲ್ಕಂಡ ಪ್ರಶ್ನಿತ ನಿವೇಶನವನ್ನು ಶ್ರೀ ಟಿ.ಆರ್.ರಘುನಾಥರಾವ್ ಬಿನ್ ಟಿ.ಆರ್.ರಾಮಚಂದ್ರರಾವ್ ರವರು ಶ್ರೀ ಬಿ.ಚೌಡಯ್ಯ ಬಿನ್ ಬಸವೇಗೌಡ ರವರ ಹೆಸರಿಗೆ ನೂರು ರೂಪಾಯಿಯ ಕಾಗದ ಪತ್ರದ ಮೇಲೆ ಬರೆದು ಕೊಟ್ಟಿರುವ ಅಂದರೆ ನೋಂದಾಯಿತವಲ್ಲದ ಕ್ರಯ ಪತ್ರದ ಆಧಾರದ ಮೇಲೆ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರ ಹೆಸರಿಗೆ 4ನೇ ಎದುರುದಾರರು ದಾನ ಪತ್ರವನ್ನು ನೋಂದಣಿ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '2 ರಿಂದ 4ನೇ ಎದುರುದಾರರುಗಳ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '2 ರಿಂದ 4ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

9. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಕುವೆಂಪು **ಬಡಾವಣೆಯಲ್ಲಿ**ರುವ ನಿವೇಶನ ಸಂಖ್ಯೆ: ಕೆ.ವಿ. 315ರ 37 X 50 ಅಡಿಗಳ ಅಳತೆವುಳ್ಳ ನಿವೇಶನವು **ಮಂಡ್ಯ ನಗರಸಭೆ** ಮುನ್ಸಿಪಲ್ ವತಿಯಿಂದ ಶ್ರೀಮತಿ ಲತಾ ಕೋಂ ಸಿ.ರಾಜಣ್ಣ ರವರ ಹೆಸರಿಗೆ

140

ಕಾನೂನು ಬಾಹಿರವಾಗಿ ಖಾತೆಯಾಗಿರುವ ನಿವೇಶನದ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 29/12/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.

29/12/17